| Publication: Kannada Prabha | Page No.4 |
| --- | --- |
| Edition –Mysore | Date – 22 Sep 21 |

Summary: The Schwab Foundation for Social Entrepreneurship, the sister organisation of the World Economic Forum and the Jubilant Bhartia Foundation, a not for profit organisation of Jubilant Bhartia Group today announced the finalists of the 12th Social Entrepreneur of the Year Award - India 2021.

# ವರ್ಷದ ಸಾಮಾಜಿಕ ಉದ್ಯಮಿ ಪ್ರಶಸ್ತಿಗೆ ಅಂತಿಮ ಸ್ಪರ್ಧಿಗಳ ಆಯ್ಕೆ

ಮೈಸೂರು: ಶ್ವಾಬ್ ಫೌಂಡೇಶನ್ ಮತ್ತು ಜ್ಯುಬಿಲಿಯಂಟ್ ಭಾರ್ತಿಯಾ ಫೌಂಡೇಷನ್ ವತಿಯಿಂದ ನಾಲ್ಕು ಅಧಿಕ-ಪ್ರಭಾವೀ ಸಾಮಾಜಿಕ ಉದ್ಯಮಿಗಳನ್ನು ವರ್ಷದ ಸಾಮಾಜಿಕ ಉದ್ಯಮಿ ಪ್ರಶಸ್ತಿ-ಭಾರತ 2021ದ ಅಂತಿಮ ಸ್ಪರ್ಧಿಗಳಾಗಿ ಆಯ್ಕೆ ಮಾಡಲಾಗಿದೆ. ಜುಬಿಲಾಂಟ್ ಭಾರ್ತಿಯ ಗ್ರೂಪ್ನ ಲಾಭಕ್ಕಾಗಿಯಲ್ಲದ ಸಂಸ್ಥೆಯಾದ ವರ್ಲ್ಡ್ ಎಕನಾಮಿಕ್ ಫೋರಮ್ ಅಂಡ್ ಜುಬಿಲಾಂಟ್ ಭಾರ್ತಿಯ ಫೌಂಡೇಷನ್‌ನ ಸಹೋದರ ಸಂಸ್ಥೆಯಾದ ಶ್ವಾಬ್ ಫೌಂಡೇಶನ್ ಫಾರ್ ಸೋಶಿಯಲ್ ಆಂತ್ರೆಪ್ರೆನ್ಯೂರ್ಶಿಪ್, 12ನೆ ವರ್ಷದ ಸಾಮಾಜಿಕ ಉದ್ಯಮಿ ಪ್ರಶಸ್ತಿ-ಭಾರತ 2021ಗೆ ಅಂತಿಮ ಸ್ಪರ್ಧಿಗಳನ್ನು ಘೋಷಿಸಿತು. ಅವಾರ್ಡ್ ಇಂಡಿಯಾ-2021ದ ಅಂತಿಮ ಸ್ಪರ್ಧಿಗಳಾಗಿ ಪ್ರತಿಷ್ಠಿತ ಸಾಮಾಜಿಕ ಉದ್ಯಮಿಗಳನ್ನು ಆಯ್ಕೆ ಮಾಡಿದೆ. ಆರ್ಮ್ಮಾನ್‌ನ ಅಪರ್ಣ ಹೆಗ್ಡೆ, ಎಫ್ಐಎ ಗ್ಲೋಬಲ್‌ನ ಸೀಮಾ ಪ್ರೇಮ್, ಕರೋ ಸಂಭವ್‌ನ ಪ್ರಾಂಶು ಶಿಂಘಾಲ್, ಉಜಾಲಾ ಸಿಗ್ನಸ್‌ನ ಆಡಿ ಶಚಿನ್ ಬಜಾಜ್ ಅವರನ್ನು ಆಯ್ಕೆ ಮಾಡಲಾಗಿದೆ. ಉದ್ಯಮ ಪರಿಣತರು ಮತ್ತು ವಿವಿಧ ಕ್ಷೇತ್ರಗಳ ಪ್ರತಿಷ್ಠಿತ ವ್ಯಕ್ತಿಗಳನ್ನು ಒಳಗೊಂಡ ಶ್ರೇಷ್ಠ ತೀರ್ಪುಗಾರರ ತಂಡವು ಪ್ರಶಸ್ತಿಗಾಗಿ ವಿಜೇತರನ್ನು ಆಯ್ಕೆ ಮಾಡಲಿದೆ. ವರ್ಚುವಲ್ ಸಮಾರಂಭದಲ್ಲಿ ವರ್ಷದ ಸಾಮಾಜಿಕ ಉದ್ಯಮಿ ಪ್ರಶಸ್ತಿ-ಭಾರತ 2021 ವಿಜೇತರನ್ನು ಘೋಷಿಸಲಾಗಿದೆ. ಆಯ್ಕೆಯಾದ ಅಂತಿಮ ಸ್ಪರ್ಧಿಗಳು, ತಾಯ್ತನ ಮತ್ತು ಶಿಶು ಆರೋಗ್ಯಶುಶ್ರೂಷೆ, ಸೇವಾವಂಚಿತರ ಹಣಕಾಸು ಸೇವೆಗಳ ಒಳಗೊಳ್ಳುವಿಕೆ, ವರ್ತುಲ ಆರ್ಥಿಕತೆ (ಇ-ತ್ಯಾಜ್ಯ, ಪ್ಲಾಸ್ಟಿಕ್ ಪ್ಯಾಕೇಜಿಂಗ್ ತ್ಯಾಜ್ಯದ ಮರುಬಳಕೆ), ಬ್ಯಾಟರಿ ತ್ಯಾಜ್ಯ ಮತ್ತು ಗಾಜು ಹಾಗು ಸೇವಾವಂಚಿತರಿಗೆ ಉತ್ಕೃಷ್ಟ ಗುಣಮಟ್ಟದ ಆರೋಗ್ಯಶುಶ್ರೂಷಾ ಸೇವೆಗಳ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಂತ್ರಜ್ಞಾನ ಶಕ್ತಿವರ್ಧಕರು.